**B**

**SL. No. : S**

ಒಟ್ಟು ಪ್ರಶ್ನೆಗಳ ಸಂಖ್ಯೆ : 49 ]
Total No. of Questions : 49 ]

**CCE RR**
**UNREVISED**

[ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8
[ Total No. of Printed Pages : 8

**ಸಂಕೇತ ಸಂಖ್ಯೆ : 01-K**

**Code No. : 01-K**

# ವಿಷಯ : ಪ್ರಥಮ ಭಾಷೆ — ಕನ್ನಡ

# Subject : First Language — KANNADA

**( ಹಳೆ ಪಠ್ಯಕ್ರಮ / Old Syllabus )**

**( ಪುನರಾವರ್ತಿತ ಶಾಲಾ ಅಭ್ಯರ್ಥಿ / Regular Repeater )**

ದಿನಾಂಕ : 25. 06. 2019 ] [ Date : 25. 06. 2019

ಸಮಯ : ಬೆಳಗ್ಗೆ 9-30 ರಿಂದ 12-30 ರವರೆಗೆ ] [ Time : 9-30 A.M. to 12-30 P.M.

ಗರಿಷ್ಠ ಅಂಕಗಳು : 100 ] [ Max. Marks : 100

***ಪರೀಕ್ಷಾರ್ಥಿಗಳಿಗೆ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು 49 ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳನ್ನು ಹೊಂದಿದೆ.

2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.

3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.

4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.

5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

ಇಲ್ಲಿ ಕತ್ತರಿಸಿ

**TEAR HERE TO OPEN THE QUESTION PAPER**
**ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ**

**Tear here**

## ವಿಭಾಗ – 'ಎ'

**(ಪಠ್ಯಗಳ ಅಧ್ಯಯನ – ಗದ್ಯ, ಪದ್ಯ, ಪೋಷಕ ಅಧ್ಯಯನ)**

**ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ *ಒಂದೊಂದು* ವಾಕ್ಯದಲ್ಲಿ ಉತ್ತರ ಬರೆಯಿರಿ :** $9 \times 1 = 9$

1. ಶ್ರೀರಾಮನ ತಂದೆಯ ಹೆಸರೇನು ?
2. ವಿ.ಕೃ. ಗೋಕಾಕ್‌ರವರು ಜೀವನದಲ್ಲಿ ಯಾವುದಕ್ಕೆ ಹೆಚ್ಚಿನ ಸ್ಥಾನವಿದೆ ಎಂದು ಹೇಳಿದ್ದಾರೆ ?
3. ರಾಯನು ವಿಧಿಸಿದ ಕಟ್ಟಳೆಯನ್ನು ಮೀರಿದರೆ ಆಗುವ ಪರಿಣಾಮವೇನು ?
4. ವಿಶ್ವೇಶ್ವರಯ್ಯ ಅವರ ಹುಟ್ಟುಹಬ್ಬದ ನೆನಪಿಗಾಗಿ ಯಾವ ದಿನಾಚರಣೆಯನ್ನು ಮಾಡಲಾಗುತ್ತಿದೆ ?
5. 'ಮಲೆಗಳಲ್ಲಿ ಮದುಮಗಳು' ಯಾರು ಬರೆದ ಕಾದಂಬರಿ ?
6. ಹಕ್ಕಿಯ ಕಣ್ಣುಗಳು ಯಾವುವು ?
7. ವಚನಕಾರರು ಯಾವುದನ್ನು ಮರವನೇರಿದ ಮರ್ಕಟ ಎಂದಿದ್ದಾರೆ ?
8. ಅಳುವ ಕಂದನನ್ನು ನಗಿಸಲು ಕವಯಿತ್ರಿ ಇಂದುಮತಿ ಲಮಾಣಿಯವರು ಏನಾಗ ಬಯಸಿದ್ದಾರೆ ?
9. ಪಾರಿವಾಳಗಳು ಯಾವಾಗ ಆನಂದಿಸಿದವು ?

**ಈ ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** $10 \times 2 = 20$

10. ಸಾಧಕನ ಯೋಗಕ್ಷೇಮವನ್ನು ಸಮಾಜ ಹೇಗೆ ನಿರ್ವಹಿಸುತ್ತಿತ್ತು ?
11. ಬುಕ್ಕರಾಯನು ನಡೆಸಿದ ಧರ್ಮಸಭೆಗೆ ಯಾರನ್ನೆಲ್ಲ ಆಹ್ವಾನಿಸಿದನು ?
12. ಸ್ವಯಂಚಾಲಿತ ಬಾಗಿಲುಗಳ ಅನ್ವೇಷಣೆಯಲ್ಲಿ ವಿಶ್ವೇಶ್ವರಯ್ಯನವರ ಕೊಡುಗೆಗಳನ್ನು ಬರೆಯಿರಿ.
13. 'ವಚನಧರ್ಮ'ದ ಬಗೆಗೆ ದೇವನೂರರ ಅಭಿಪ್ರಾಯ ತಿಳಿಸಿ.
14. ಭಕ್ತಿ ಮತ್ತು ನಿಷ್ಠೆಯ ಬಗ್ಗೆ ಜೇಡರದಾಸಿಮಯ್ಯನ ಅಭಿಪ್ರಾಯವನ್ನು ಬರೆಯಿರಿ.
15. ಕವಯಿತ್ರಿ ದು. ಸರಸ್ವತಿಯವರು ಒಡಲು ಅನುಭವಿಸುವ ಸಂಕಟಕೆ ಗಡಿಯಿಲ್ಲ ಎಂದು ಹೇಳಲು ಕಾರಣವೇನು ?
16. ವೈಜ್ಞಾನಿಕ ಸಂಶೋಧನೆಗಳು ಯಾವಾಗ ಅರ್ಥರಹಿತವಾಗುತ್ತವೆ ?
17. ಭರತ ಚಕ್ರವರ್ತಿಗೆ ತನ್ನ ಹೆಸರನ್ನು ಬರೆಸಲು ಏಕೆ ಸಾಧ್ಯವಾಗಲಿಲ್ಲ ?
18. 'ಅನ್‌ಟು ದಿಸ್ ಲಾಸ್ಟ್' ಕೃತಿ ಗಾಂಧೀಜಿಯವರ ಮೇಲೆ ಯಾವ ಪರಿಣಾಮ ಬೀರಿತು ?
19. 'ಉಪ್ಪು' ಎಂಬ ಉತ್ತರ ಬರಲು ಹೇಳಿದ ಒಗಟನ್ನು ಬರೆಯಿರಿ.

**ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ :** 4 × 3 = 12

20. "ತಾಯಿ, ದಾರಿಗರಿಗೆ ಬೀಡಿಲ್ಲಿ ದೊರೆಯುವುದೇ ?"

21. "ನಿನ್ನ ಪಟುವಗೆ ನಮ್ಮ ಕುಲಮನೆಲ್ಲಮನಟಿವ ಬಗೆ"

22. "ಎಲ್ಲ ಜನರಿಗೆ ಜೋರ ಮಾಡಿ ಕಸಿದುಕೊಳ್ಳಿರಿ ಹತಾರ"

23. "ಅರಸುಗಳ ವಾಜಿಯಂ ಬಿಡು"

**ಈ ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿ / ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ :** 2 × 3 = 6

24. ಎ.ಎನ್. ಮೂರ್ತಿರಾವ್

25. ದ.ರಾ. ಬೇಂದ್ರೆ

26. **ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ :** 1 × 4 = 4

ಕೊರಳ ಸೆರೆ ಹಿಗ್ಗಿದವು ದೃಗುಜಲ

.....................................................................

.....................................................................

.....................................................................

.....................................................................

ನರುಹಿ ಕೊಂದನು ಹಲವು ಮಾತೇನೆಂದು ಚಿಂತಿಸಿದ.

***ಅಥವಾ***

ಮಾರಿಗೌತಣವಾಯ್ತು ನಾಳಿನ

.....................................................................

.....................................................................

.....................................................................

.....................................................................

ವೀರಶೈವರ ನೋಯಿಸೆನು ರಾಜೀವಸಖನಾಣೆ.

27. **ಈ ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ :** 1 × 4 = 4

ಸುತ್ತಲು ಕವಿಯುವ ಕತ್ತಲೆಯೊಳಗೆ
ಪ್ರೀತಿಯ ಹಣತೆಯ ಹಚ್ಚೋಣ
ಬಿರುಗಾಳಿಗೆ ಹೊಯ್ದಾಡುವ ಹಡಗನು
ಎಚ್ಚರದಲಿ ಮುನ್ನಡೆಸೋಣ.

**ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** $2 \times 4 = 8$

28. ಗೊರೂರು ರಾಮಸ್ವಾಮಿ ಅಯ್ಯಂಗಾರರ ವೇಷಭೂಷಣಗಳು ಹೇಗಿದ್ದವು ?

***ಅಥವಾ***

ಖಾದಿ ಬಟ್ಟೆಯ ವೈಶಿಷ್ಟ್ಯವನ್ನು ಗೊರೂರರು ಅಮೆರಿಕದ ಉಪಾಧ್ಯಾಯರು ಮತ್ತು ವಿದ್ಯಾರ್ಥಿಗಳಿಗೆ ಹೇಗೆ ಪರಿಚಯಿಸಿದರು ? ವಿವರಿಸಿ.

29. ಧೃತರಾಷ್ಟ್ರನು ಸಂಧಿಮಾಡಿಕೊ ಎಂದು ದುರ್ಯೋಧನನಿಗೆ ಹೇಳಲು ಕಾರಣವೇನು ? ವಿವರಿಸಿ.

***ಅಥವಾ***

ದುರ್ಯೋಧನನ ತಂದೆ–ತಾಯಿಯರು ಅವನನ್ನು ಸಂಧಿಗಾಗಿ ಪ್ರಾರ್ಥಿಸಿದ ರೀತಿಯನ್ನು ವಿವರಿಸಿ.

30. **ಈ ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :** $2 \times 2 = 4$

ಮದ್ಯಪಾನವು ಕೇವಲ ಆರ್ಥಿಕ ಹಾನಿಯನ್ನುಂಟು ಮಾಡುತ್ತದೆ ಎಂದಲ್ಲ. ಅದರಿಂದಾಗುವ ಕೆಡುಕುಗಳನ್ನು ನೆನೆಸಿಕೊಂಡರೆ ಸಾಕು ಮೈಮನ ನಡುಗುತ್ತವೆ. ಮದ್ಯವು ಇತರ ಆಹಾರಗಳಂತೆ ನಮ್ಮ ಶರೀರಕ್ಕೆ ಶಕ್ತಿಯನ್ನು ನೀಡುವಂತ ಗುಣವಿಶೇಷವನ್ನು ಹೊಂದಿಲ. ಅದು ದೇಹಕ್ಕೆ ಹಾನಿಕಾರಕ ಪ್ರತಿಕ್ರಿಯೆಯನ್ನುಂಟು ಮಾಡುವ ಗುಣಗಳಿಂದ ಕೂಡಿರುವುದೆಂದು ತಜ್ಞರ ಪರೀಕ್ಷೆಗಳಿಂದ ದೃಢಪಟ್ಟಿದೆ. ಇದು ಜಠರದಲ್ಲಿ ಕೆರಳಿಕೆಯನ್ನುಂಟು ಮಾಡುವುದು. ಪಿತ್ತಕೋಶ, ಮೂತ್ರ ಪಿಂಡಗಳಲ್ಲಿ ವಿನಾಶಕಾರಕ ಪ್ರತಿಕ್ರಿಯೆಯನ್ನುಂಟು ಮಾಡುವುದು. ನರಗಳ ದೌರ್ಬಲ್ಯವನ್ನುಂಟುಮಾಡಿ ಕರ್ತವ್ಯ ದಕ್ಷತೆಯನ್ನು ನಾಶಪಡಿಸಿ ಸಿಡುಕುತನ, ಮುಂಗೋಪ, ದುರ್ಬುದ್ಧಿಯನ್ನು ಅಧಿಕಗೊಳಿಸುವುದು. ಇದರ ತೀಕ್ಷ್ಣತೆ ಹೆಚ್ಚಾದಂತೆಲ್ಲ ತೂರಾಡುವ ನಡುಗೆ, ಅಸಂಬದ್ಧವಾದ ಮಾತುಕತೆ, ದುಷ್ಕೃತ್ಯವನ್ನೆಸಗುವ ಮನೋಭಾವಗಳು ಬೆಳೆಯುವುದು. ಅನೇಕ ರೋಗಗಳಿಗೆ ಬಲಿಯಾಗುವರು. ಸಮಾಜಕ್ಕೆ ಕಂಟಕಪ್ರಾಯರಾಗುವರು. ಕುಡಿತದ ಪರಿಣಾಮವಾಗಿ ವ್ಯಕ್ತಿಯು ತಾನು ಆರ್ಥಿಕವಾಗಿ, ದೈಹಿಕವಾಗಿ ಹಾಳಾಗುವುದರ ಜೊತೆಗೆ ರಾಷ್ಟ್ರೀಯ ಆರ್ಥಿಕಾಭಿವೃದ್ಧಿಗೂ, ಆರೋಗ್ಯಕ್ಕೂ, ಸಾಮಾಜಿಕ ನೆಮ್ಮದಿಗೂ ಭಂಗ ತರುತ್ತಾನೆ. ಆದ್ದರಿಂದ ವ್ಯಕ್ತಿಯು ಮದ್ಯಪಾನದಂತಹ ದುಶ್ಚಟಕ್ಕೆ ಬಲಿಬೀಳದೆ ಸನ್ಮಾರ್ಗದಲ್ಲಿ ನೆಮ್ಮದಿಯ ಬಾಳುವೆ ಮಾಡುವುದು ಪರಮ ಪವಿತ್ರ ಕರ್ತವ್ಯವಾಗಿದೆ.

*ಪ್ರಶ್ನೆಗಳು :*

ಅ) ಮದ್ಯಪಾನವು ದೇಹದ ಮೇಲೆ ಬೀರುವ ಪರಿಣಾಮವನ್ನು ತಿಳಿಸಿ.

ಆ) ತಜ್ಞರ ಪರೀಕ್ಷೆಗಳಿಂದ ದೃಢಪಡಿಸುವ ಅಂಶ ಯಾವುದು ?

## ವಿಭಾಗ – 'ಬಿ'

### (ಅನ್ವಯಿಕ ವ್ಯಾಕರಣ, ಅಲಂಕಾರ ಹಾಗೂ ಛಂದಸ್ಸು)

**ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ :** $10 \times 1 = 10$

31. 'ತುತ್ತತುದಿ' ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ

(ಎ) ಜೋಡುನುಡಿ (ಬಿ) ದ್ವಿರುಕ್ತಿ

(ಸಿ) ಕ್ರಿಯಾರ್ಥಕಾವ್ಯಯ (ಡಿ) ಕ್ರಿಯಾಪದ

32. ಪಾರಿಭಾಷಿಕ ಪದಗಳನ್ನು ಬಳಸುವಾಗ, ಅನ್ಯಭಾಷೆಯ ಪದಗಳನ್ನು ಬಳಸುವಾಗ ಬರುವ ಲೇಖನ ಚಿಹ್ನೆ

(ಎ) ಉದ್ಧರಣ ಚಿಹ್ನೆ (ಬಿ) ಅರ್ಧವಿರಾಮ ಚಿಹ್ನೆ

(ಸಿ) ಆವರಣ ಚಿಹ್ನೆ (ಡಿ) ವಾಕ್ಯವೇಷ್ಠನ ಚಿಹ್ನೆ

33. 'ಷಣ್ಮುಖ' ಪದವು ಈ ಸಂಧಿಗೆ ಉದಾಹರಣೆಯಾಗಿದೆ

(ಎ) ವೃದ್ಧಿ ಸಂಧಿ (ಬಿ) ಜಶ್ತ್ವ ಸಂಧಿ

(ಸಿ) ಅನುನಾಸಿಕ ಸಂಧಿ (ಡಿ) ಆದೇಶ ಸಂಧಿ

34. 'ಮೂಗಾವುದ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ

(ಎ) ಕ್ರಿಯಾ ಸಮಾಸ (ಬಿ) ಬಹುವ್ರೀಹಿ ಸಮಾಸ

(ಸಿ) ದ್ವಿಗು ಸಮಾಸ (ಡಿ) ಗಮಕ ಸಮಾಸ

35. ಬೀದರಿನಲ್ಲಿ ಕಾಲರಾ ವ್ಯಾಪಕವಾಗಿ ಹಬ್ಬಿತ್ತು. – ಈ ವಾಕ್ಯವು

(ಎ) ಸಂಯೋಜಿತ ವಾಕ್ಯ (ಬಿ) ಸಾಮಾನ್ಯ ವಾಕ್ಯ

(ಸಿ) ಮಿಶ್ರ ವಾಕ್ಯ (ಡಿ) ಪ್ರಶ್ನಾರ್ಥಕ ವಾಕ್ಯ

36. ಕೃದಂತಭಾವನಾಮಕ್ಕೆ ಉದಾಹರಣೆಯಾದ ಪದವಿದು

(ಎ) ತಿನ್ನುವಿಕೆ (ಬಿ) ತಿನ್ನುವ

(ಸಿ) ತಿಂದ (ಡಿ) ತಿನ್ನಲು

37. ಪಂಚಮೀ ವಿಭಕ್ತಿಯ ಪ್ರತ್ಯಯವಿದು

(ಎ) ಇಂ (ಬಿ) ಅಂ

(ಸಿ) ಒಳ್ (ಡಿ) ಅತ್ತಣಿಂ

38. ಕ್ರಿಯಾಪದದ ಮೂಲರೂಪ

(ಎ) ಪ್ರಾತಿಪದಿಕ (ಬಿ) ಧಾತು

(ಸಿ) ಸರ್ವನಾಮ (ಡಿ) ಪ್ರತ್ಯಯ

39. 'ದೇಶ' ಪದವು ನಾಮಪದದ ಈ ಗುಂಪಿಗೆ ಸೇರುತ್ತದೆ

(ಎ) ರೂಢನಾಮ (ಬಿ) ಅಂಕಿತನಾಮ

(ಸಿ) ಅನ್ವರ್ಥನಾಮ (ಡಿ) ಆತ್ಮಾರ್ಥಕ ಸರ್ವನಾಮ

40. ಸಾಮಾನ್ಯಾವ್ಯಯಕ್ಕೆ ಉದಾಹರಣೆಯಾದ ಪದವಿದು

(ಎ) ಧಗಧಗ (ಬಿ) ಸಾಕು

(ಸಿ) ಸೊಗಸಾಗಿ (ಡಿ) ಅಥವಾ

**ಈ ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ :** $4 \times 1 = 4$

41. ಕಾವ್ಯ : ಕಬ್ಬ :: ವ್ಯಾಪಾರಿ : ......................... .

42. ತಂಬಾಕು : ಪೋರ್ಚ್‌ಗೀಸ್ :: ರುಜು : ......................... .

43. ಮೇದಿನಿ : ಭೂಮಿ :: ಲಲನೆ : ......................... .

44. ಮಾಡುತ್ತ : ಕೃದಂತಾವ್ಯಯ :: ಕನ್ನಡಿಗ : ......................... .

45. **ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ :** $1 \times 3 = 3$

ಮರುಳು ಮಾಧವ ಮಹಿಯ ರಾಜ್ಯದ
ಸಿರಿಗೆ ಸೋಲುವನಲ್ಲ ಕೌಂತೇ
ಯರು ಸುಯೋಧನರೆನಗೆ ಬೆಸಕೈವಲ್ಲಿ ಮನವಿಲ್ಲ

***ಅಥವಾ***

ಉರ್ವಿಯೊಳ್ ಕೌಸಲ್ಯೆ ಪಡೆದ ಕುವರಂ ರಾಮ
ನೊರ್ವನೇ ವೀರನಾತನ ಯಜ್ಞತುರಗಮಿದು
ನಿರ್ವಹಿಸಲಾರ್ಪರಾರಾದೊಡಂ ತಡೆಯಲೆಂದಿರ್ದ ಲೇಖನವನೋದಿ

46. **ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ :** $1 \times 3 = 3$

"ನೀಚರಿಗೆ ಮಾಡಿದ ಉಪಕಾರವು ಹಾವಿಗೆ ಹಾಲೆರೆದಂತೆ"

***ಅಥವಾ***

"ಮಾರಿಗೌತಣವಾಯ್ತು ನಾಳಿನ ಭಾರತವು"

## ವಿಭಾಗ – 'ಸಿ'

## (ವಾಕ್ಯರಚನೆ ಹಾಗೂ ಬರೆವಣಿಗೆ ಕೌಶಲ)

47. **ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ *ಒಂದನ್ನು* ವಿಸ್ತರಿಸಿ ಬರೆಯಿರಿ :** 1 × 3 = 3

* ದೇಶ ಸುತ್ತು; ಕೋಶ ಓದು
* ಮಾಡಿದ್ದುಣ್ಣೋ ಮಹರಾಯ
* ಮಾತೇ ಮುತ್ತು; ಮಾತೇ ಮೃತ್ಯು

48. ನಿಮ್ಮನ್ನು ಹಾವೇರಿಯ ಕನಕದಾಸ ಪ್ರೌಢಶಾಲೆಯ 'ವೇದಶ್ರೀ' ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ಆಚರಿಸಿದ 'ಗ್ರಂಥಾಲಯ ದಿನಾಚರಣೆ' ಕಾರ್ಯಕ್ರಮದ ವರದಿಯನ್ನು ಪ್ರಕಟಿಸುವಂತೆ ಕೋರಿ 'ಹೊಸ ದಿಗಂತ' ದಿನಪತ್ರಿಕೆಯ ಸಂಪಾದಕರಿಗೆ ಒಂದು ಮನವಿ ಪತ್ರ ಬರೆಯಿರಿ. 1 × 5 = 5

***ಅಥವಾ***

ನಿಮ್ಮನ್ನು ಹುಬ್ಬಳಿಯ ವಿವೇಕಾನಂದ ಪ್ರೌಢಶಾಲೆಯ 'ಉತ್ಸವ' ಎಂದು ಭಾವಿಸಿಕೊಂಡು ಹತ್ತನೇ ತರಗತಿ ವಾರ್ಷಿಕ ಪರೀಕ್ಷೆಯ ಪೂರ್ವತಯಾರಿಯನ್ನು ವಿವರಿಸಿ ಗದಗಿನ ಪಂಚಾಕ್ಷರಿಗವಾಯಿ ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಗೆಳೆಯ 'ಉಲ್ಲಾಸ'ನಿಗೆ ಒಂದು ಪತ್ರ ಬರೆಯಿರಿ.

49. **ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೂ *ಒಂದನ್ನು* ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆ ಇಲ್ಲದಂತೆ ಪ್ರಬಂಧ ಬರೆಯಿರಿ :** 1 × 5 = 5

* ಅತಿವೃಷ್ಟಿಯಿಂದಾಗುವ ಅನಾಹುತಗಳು
* ನನ್ನ ಮೆಚ್ಚಿನ ಪುಸ್ತಕ
* ನಿರುದ್ಯೋಗ ಸಮಸ್ಯೆ